▸ ಮಾರ್ಚ್ ಸಂಚಿಕೆಯ ಆಕರ್ಷಕ ಮುಖಪುಟ ಕಣ್ಮನ ಸೆಳೆಯಿತು. ಈ ಬಾರಿಯ ಕತೆಗಳು ಹಾಗೂ ವಿಶೇಷ ಬರಹಗಳು ಸಂಗ್ರಹಯೋಗ್ಯ ಹಾಗೂ ವಿಚಾರಯೋಗ್ಯವಾಗಿವೆ.

**ಸುಧಾ ಇಂದೂಧರಪ್ರಸಾದ್, ಬಿ.ಜಿ. ಕೆರೆ**

▸ ಇಂಗ್ಲಿಷ್ ಕಾದಂಬರಿಗಾರ್ತಿ ಟೋನಿ ಮಾರಿಸನ್ ಅವರ ಸಂದರ್ಶನ 'ಬರವಣಿಗೆ ನನ್ನ ಹೋರಾಟದ ಅಸ್ತ್ರ' (ಕನ್ನಡಕ್ಕೆ: ಹೇಮಾ ಎಸ್.) ವಿಶೇಷ ಬರಹವಾಗಿದೆ. ಅವರ ನಿರ್ಭಿಡೆಯ ಮಾತುಗಳು ಮನಮುಟ್ಟುತ್ತವೆ. ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ ಚಂಪಾ ಅವರ ಕುರಿತ ಬರಹಗಳು ಆಪ್ತವಾಗಿದ್ದವು.


**ಬಿ.ಆರ್. ಅಣ್ಣಾಸಾಗರ, ಸೇಡಂ**

▸ ಜಿ.ಎಸ್. ಜಯದೇವ ಅವರ 'ಜೇನು ಇಳಿಸಿದ ಪ್ರಸಂಗ' ಪ್ರಬಂಧದಲ್ಲಿ ಜೇನು ಇಳಿಸುವ ಪ್ರಸಂಗ ಕಣ್ಣಿಗೆ ಕಟ್ಟುವಂತೆ ಮೂಡಿಬಂದಿದೆ. ಸೋಲಿಗರ ಅನುಭವಗಳು ಪ್ರಬಂಧದಲ್ಲಿ ಬಳಕೆಯಾದ ರೀತಿ ಇಷ್ಟವಾಯಿತು.

**ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ**

▸ ಬರಗೂರು ರಾಮಚಂದ್ರಪ್ಪ ಅವರು 'ಚಂಪಾ: (ವಿ)ಭಿನ್ನ ದನಿಯ ಬಂಡಾಯಗಾರ' ಲೇಖನದಲ್ಲಿ ''ಸಂಕ್ರಮಣ'ದ ವಿಷಯ ಹೇಳದಿದ್ದರೆ ಚಂಪಾ ಅವರ ಬಗ್ಗೆ ಪೂರ್ಣ ಹೇಳಿದಂತೆ ಆಗುವುದಿಲ್ಲ' ಎಂದಿದ್ದಾರೆ. ನಿಜ, 'ಸಂಕ್ರಮಣ' ಇಡೀ ಕರ್ನಾಟಕದ ಉದಯೋನ್ಮುಖ ಬರಹಗಾರರಿಗೆ ಸಾಹಿತ್ಯದ ಒಳ–ಹೊರಗನ್ನೆಲ್ಲಾ ಬಿಚ್ಚಿಡುವ ಏಕಮಾತ್ರ ಪತ್ರಿಕೆಯಾಗಿತ್ತು.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**




▸ ಹೋರಾಟವನ್ನು ತಮ್ಮ ಬದುಕಿನ ಒಂದು ಭಾಗವೆಂದೇ ಭಾವಿಸಿದ್ದ ಚಂಪಾ ಅವರ ಕುರಿತ ಬರಗೂರು ರಾಮಚಂದ್ರಪ್ಪ ಹಾಗೂ ಬಸವರಾಜ ಸಾದರ ಅವರ ಬರಹಗಳು ಅರ್ಥಪೂರ್ಣವಾಗಿವೆ.

**ಬಿ.ಪಿ. ಶ್ರೀಧರ್ ಮೂರ್ತಿ, ತರೀಕೆರೆ**

▸ ಕಲೀಮ್ ಉಲ್ಲಾ ಅವರ ಪ್ರಬಂಧ 'ತಾಳಿಭಾಗ್ಯ ಪ್ರಕರಣ' ಇಂದಿನ ಪೋಷಕರಿಗೆ ಎಚ್ಚರಿಕೆಯ ಘಂಟೆಯಾಗಿದೆ.

**ಗಿರೀಶ್ ಕೆ.ಎಚ್., ಸಾಗರ**

▸ ಶ್ವೇತಾ ಆಡುಕಳ ಅವರ ಕತೆ 'ಬದುಕಿಗೊಂದು ಅಲ್ಪವಿರಾಮ' ಮನಮುಟ್ಟುವಂತಿದೆ. ನಂದಿನಿ ಹೆದ್ದುರ್ಗ ಮತ್ತು ಕೆ.ಎಸ್. ಲಾವಣ್ಯ ಪ್ರಭಾ ಅವರ ಕವಿತೆಗಳು ('ಬೆಳಕು' ಮತ್ತು 'ಚಂದಿರ, ಹುಣ್ಣಿಮೆ, ಬೆಳದಿಂಗಳು') ಸುಂದರವಾಗಿವೆ.

**ಅಪರ್ಣಾ ಭಟ್, ತುಮಕೂರು**